## ಅಪರ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ. ದಂಢಾಧಿಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ **1162/2019**

ಡಿ ಡಬ್ಲ್ಯುಃ - 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಸ್ ಪಿ ಪ್ರಸಾದ್ ಕುಮಾರ್ |
| ತಂದೆಯ ಹೆಸರು | ಃ | ಪೊನ್ನಪ್ಪ |
| ವಯಸ್ಸು | ಃ | 41 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸಸ್ಥಳ | ಃ | ಬಲ್ಲಮಾವಟಿ ಗ್ರಾಮ |

ದಿನಾಂಕಃ **23-09-2021** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಜೆ ಜಿ ಕೆ ವಕೀಲರಿಂದಃ-

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಬಲ್ಲಮಾವಟಿಯಲ್ಲಿ ನಾನು 3.19 ಎಕರೆ ಕಾಫಿತೋಟ ಹೊಂದಿರುತ್ತೇನೆ. ನನಗೆ ದೂರುದಾರರು ಪರಿಚಯವಿಲ್ಲ. ನಾನು ದೂರುದಾರರಿಂದ ಅವರು ಹೇಳಿದಂತೆ ಕರಿ ಮೆಣಸನ್ನು ಖರೀದಿಸಿರುವುದಿಲ್ಲ. ನಾನು ದೂರುದಾರರನ್ನು ಮೊದಲ ಬಾರಿಗೆ ಈ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ನಿಪಿ 1 ಚೆಕ್ ನನ್ನದು. ನಿಪಿ 1 ದೂರುದಾರರ ಬಳಿ ಹೇಗೆ ಹೋಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ಕು ಕಳೆದುಹೋಗಿರುತ್ತದೆ. ನಾನು ಚೆಕ್ಕು ಕಳೆದ ಕುರಿತು ನಾಪೋಕ್ಲು ಶಾಖೆಯ ಇಂಡಿಯನ್ ಓವರ್ ಸೀಸ್ ಬ್ಯಾಂಕಿಗೆ ಅರ್ಜಿ ಸಲ್ಲಿಸಿರುತ್ತೇನೆ. ಚೆಕ್ಕು ಕಾಣೆಯಾದ ಕಾರಣ ನನ್ನ ಖಾತೆಯಿಂದ ಹಣವನ್ನು ನೀಡದಂತೆ ಬ್ಲಾಕ್ ಮಾಡಬೇಕಾಗಿ ಅರ್ಜಿ ಸಲ್ಲಿಸಿರುತ್ತೇನೆ. ತದ ನಂತರದಲ್ಲಿ ಬ್ಯಾಂಕಿನವರು ನನ್ನ ಖಾತೆಯಿಂದ ಹಣ ನೀಡದಂತೆ ಬ್ಲಾಕ್ ಮಾಡಿರುತ್ತಾರೆ. ದಿಃ 28-11-2018 ರಂದು ನಾನು ಬ್ಯಾಂಕಿಗೆ ಸಲ್ಲಿಸಿದ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು.

ನಿಪಿ 1 ರಲ್ಲಿರುವ ಸಹಿ ನನ್ನದಲ್ಲ. ಸಾಕ್ಷಿ ಆಪಾದನೆಯಲ್ಲಿನ ಮತ್ತು ತನ್ನ ಹೇಳಿಕೆಯಲ್ಲಿನ ಸಹಿಯನ್ನು ಗುರುತಿಸಿರುತ್ತಾರೆ.

ದೂರುದಾರರು ನನ್ನ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿರುತ್ತಾರೆ. ನಾನು ದೂರುದಾರರಿಗೆ ಯಾವುದೇ ಹಣ ನೀಡಲು ಬಾಧ್ಯಸ್ಥನಿರುವುದಿಲ್ಲ.

ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-
ಅಪರ ಜೆಎಂಎಫ್‌ಸಿ, ಮಡಿಕೇರಿ